ಅವರ ಹೆಂಡತಿ ಗುಲ್ಬರ್ಗದಲ್ಲಿರುವವರು, ಅವರನ್ನು ಬಹುಶ: ಈ ಕೆಲಸದ ಹಿಂದೆ ಇದ್ದ ಕೆಲವೇ ವ್ಯಕ್ತಿಗಳೇ ಅವರಿಗೆ ಬೆದರಿಕೆ ಹಾಕುತ್ತಿರುವರೆಂದು. ಆ ಮಹಿಳೆಗೆ ಪೋಲೀಸ್ ಇಲಾಖೆ ರಕ್ಷಣೆ ಕೊಡಬೇಕಾಗಿರುವ ಜವಾಬ್ದಾರಿಯನ್ನೂ ಕೂಡ ನಮ್ಮ ಇಲಾಖೆ ನಿರ್ವಹಿಸುತ್ತದೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:- ಇಂತಹ ಘಟನೆ ಮತ್ತೆ ಆಗಬಾರದು, ಜನ ಎಲ್ಲಾ ಸಂಘಟಿತರಾಗುತ್ತಿದ್ದಾರೆ, ಮತ್ತೆ ಇದರಿಂದ ಕೌಂಟರ್ ಆಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೇ, ಕಡಿದಾಳ್ ಎಂಬ ಹಳ್ಳಿ ಇರುವುದು ಬಾರ್ಡರ್‌ನಲ್ಲಿ, ಆಳಂದ್ ಮತ್ತು ಅಫಜಲಪುರ ಬಾರ್ಡರಿನಲ್ಲಿ ಇಂತಹ ಘಟನೆಗಳು ಯಾವಾಗಲೂ ನಡೆಯುತ್ತಿರುತ್ತವೆ ಇಲ್ಲಿ ಅಪರಾಧ ಮಾಡುವುದು ಆ ಕಡೆ ಮಹಾರಾಷ್ಟ್ರಕ್ಕೆ ಹೋಗಿ ಉಳಿದುಕೊಳ್ಳುವುದು. ಅನೇಕ ಸಾರಿ ಪೋಲೀಸರೇ ಬುಕ್ ಮಾಡುವುದು. ಕೊನೆಗೆ ಯಾರಾದರೂ ಮುಖಂಡರು ಫೋನ್ ಮಾಡಿದರೆ ಕೇಸ್ ರಿಜಿಸ್ಟರ್ ಆಗುತ್ತದೆ, ಅವರಿಗಿಂತ ಹೆಚ್ಚಿನ ಒತ್ತಡ ತರುವವರು ಇದ್ದರೆ ಕೇಸೂ ಬುಕ್ ಆಗುವುದಿಲ್ಲ. ಇಂತಹ ಪರಿಸ್ಥಿತಿ ಆ ಭಾಗದಲ್ಲಿದೆ. ಈ ಬಾರ್ಡರ್ ಏರಿಯಾದಲ್ಲಿ ಆ ಕಡೆ ಸೋಲ್ಲಾಪುರದವರು ಅಲ್ಲ ಅಪರಾಧ ಮಾಡಿ ಈ ಕಡೆ ಉಳಿಯುತ್ತಾರೆ. ಆದ್ದರಿಂದ ಪೋಲೀಸರು ಎಚ್ಚರಿಕೆ ತೆಗೆದುಕೊಳ್ಳಬೇಕು. ಇಲ್ಲಾಂದರೆ ಯಾರು ತಪ್ಪು ಮಾಡುತ್ತಿದ್ದಾರೋ ಅವರಿಗೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಮತ್ತು ಪ್ರಭಾವಿ ರಾಜಕಾರಣಿಗಳು ಆ ಭಾಗದಲ್ಲಿರುವುದರಿಂದ ಇಂಧನವರಿಗೆ ರಕ್ಷಣೆ ಕೊಡುವುದೂ ಕಾಣುತ್ತದೆ. ದ ದಯವಿಟ್ಟು ಇದನ್ನು ಆಗಕೊಡಬಾರದು. ಬಿ ಎಸ್ ಪಿಯವರೇನೋ ರ್ಯಾಲಿ ಮಾಡಿದರು, ಆಯಿತು, ಬೇರೆಯವರಿಗೇನಿದೇ? ಅನೇಕ ಕೇಸಸ್‌ನಲ್ಲಿ ಸುಟ್ಟು ಹಾಕಿರುವುದನ್ನೂ ಕೇಳಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಅಫ್ಜಲಪುರ ಮತ್ತು ಆಳಂದ್ ಗಡಿಪ್ರದೇಶ. ಈ ತರಹದ ಘಟನೆಗಳಾಗುತ್ತಿದೆ. ಹೊರಗಡೆಯಿಂದ ಬಂದು ಮಾಡಿ ಆಚೆಕಡೆಗೆ ಹೋಗಿಬಿಡುತ್ತಾರೆ. ಅಲ್ಲಿ ಸ್ವಲ್ಪ ಮಟ್ಟಿಗೆ ಪ್ರಭಾವ ಇದ್ದರೆ ಪ್ರಕರಣ ದಾಖಲಾಗುತ್ತವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿರುವ ಎಸ್ ಪಿ ಮತ್ತು ಡಿ ಐಜಿಯವರಿಗೆ ಸಂದೇಶ ಕೊಟ್ಟು ಇಂತಹ ಪ್ರಕರಣ ಮರುಕಳಿಸದಂತೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

(ಇ) ಬೆಳಗಾಂ ಶಾಸಕರಾದ ಶ್ರೀ ಬಿ.ಟಿ. ಪಾಟೀಲ್ ರವರ ಮೇಲೆ ಹಲ್ಲೆ

Sri. B.I. Patil (Uchagaon): Sir, I have put the Calling Attention Notice regarding the attack on me and my other workers at Achar Galli, Shahapur, Belgaum, on 16.02.1998. The persons who attacked on me, I do not call them as B.J.P workers, they are goondas and wild animals . This Calling Attention Notice has been supported bythe Hon'ble Leader of the Opposition Sri Mallikarjuna Kharge, Sri Vatal Nagaraj, Sri K.S. Puttanaiah, Sri Narayana Rao Tarale, Sri Syed Julfikar Hashmi and others. I want a reply from the Hon'ble Ministers.

★ Sri M.C. Nanaiah (Hon'ble Ministers for Law and Parliamentary Affairs) on behalf of Sri Roshan Baig (Hon'ble Ministers for Home and Wakf): Sir, ದಿನಾಂಕ: 14.2. 1998 ರಂದು ಬೆಳಗಾಂ ಪಟ್ಟಣದಲ್ಲಿ ಸುಮಾರು 1500ರ ಸಮಯದಲ್ಲಿ ಬಿಜೆಪಿ ಅಭ್ಯರ್ಥಿಯ ಚುನಾವಣೆ ಪ್ರಚಾರದ ಮೆರವಣಿಗೆಯು ಶ್ರೀ ಬಿ.ಐ. ಪಾಟೀಲ್, ಸ್ವಾತಂತ್ರ ಅಭ್ಯರ್ಥಿ (ಎಂ.ಇ.ಎಸ್) ಬೆಳಗಾವಿ ಕಾಲೇಜ್ ರಸ್ತೆಯಲ್ಲಿರುವ ಪಕ್ಷದ ಕಛೇರಿಯ ಮುಂದೆ ಹೋಗುವಾಗ, ಅಭ್ಯರ್ಥಿಯ ವಿರುದ್ಧ ಘೋಷಣೆಗಳನ್ನು ಕೂಗಿರುತ್ತಾರೆ. ಮತ್ತು ಮೆರವಣಿಗೆಯಲ್ಲಿದ್ದ ಕೆಲವರು ಸ್ವಾತಂತ್ರ ಅಭ್ಯರ್ಥಿಯನ್ನು ಅವಾಚ್ಯ ಶಬ್ದಗಳಿಂದ ಬೈದು ಪಕ್ಷದ ಕಛೇರಿಯ ಮೇಲೆ ಕಲ್ಲು ತೂರಿ ಕಿಟಕಿಯ ಗಾಜುಗಳನ್ನು ಹಾಳು ಮಾಡಿರುತ್ತಾರೆ. ಈ ಸಂಬಂಧವಾಗಿ ಶ್ರೀ ಪಿ.ಎ. ಪಾವಸೆ, ಉಚಗಾಂ ರವರು ನೀಡಿದ ದೂರಿನನ್ವಯ ಖಾಡೇಬಜಾರ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 23:98 ಕಲಂ 143, 147, 148, 336, 427 504 ಜೊತೆಗೆ 149 ಐಪಿಸಿ ಪ್ರಕಾರ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತದೆ. ಅದೇ ದಿನ ಶ್ರೀ ಪರಮಾನಂದ್ ಗೋದ್ವಾನಿ, ಬೆಳಗಾವಿ ಸಿಟಿ, ಬಿಜೆಪಿ ಅಧ್ಯಕ್ಷರು ಕ್ಯಾಂಪ್ ಪೋಲೀಸ್ ಠಾಣೆಗೆ ಹಾಜರಾತಿ ನೀಡಿದ ದೂರಿನಲ್ಲ ದಿನಾಂಕ: 14.2. 1998 ರಂದು ಸುಮಾರು 1545 ಗಂಟೆಗೆ ಬೆಳಗಾವಿಯ ಲಿಂಗರಾಜ್ ಕಾಲೇಜ ಸಮೀಪ ಬಿಜೆಪಿ ಪಕ್ಷದ ರ್ಯಾಲಿಯು ಹೋಗುತ್ತಿರುವಾಗ ಸುಮಾರು 50 ರಿಂದ 60 ಕಿಡಿಗೇಡಿಗಳು ರ್ಯಾಲಿಯ ಮೇಲೆ ಕಲ್ಲು ತೂರಿದ್ದು, ರ್ಯಾಲಿಯಲ್ಲಿದ್ದ ಶ್ರೀ ಮಹೇಶ್ ಮೊಹಿಡೆ ಮತ್ತು ಇನ್ನಿತರೆ 2-3 ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ ಎಂದು ಮತ್ತು ಕೆಲವು ವಾಹನಗಳಿಗೆ ಜಖಂ ಆಗಿರುತ್ತವೆಂದು ತಿಳಿಸಿದ್ದರ ಮೇರೆಗೆ ಕ್ಯಾಪ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 8:98 ಕಲಂ 143, 147, 148, 323, 427 ಜೊತೆಗೆ 149 ಐಪಿಸಿ ಪ್ರಕಾರ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ದಿನಾಂಕ: 16.2. 1998 ರಂದು ಸುಮಾರು 12-00 ಗಂಟೆಯ ಸಮಯದಲ್ಲಿ ಶ್ರೀ ಬಿ.ಐ. ಪಾಟೀಲ, ಎಂ. ಇ. ಎಸ್. ಅಭ್ಯರ್ಥಿರವರು ತಮ್ಮ ಅನುಯಾಯಿಗಳೊಂದಿಗೆ ಟಾಟಾ ಎಸ್ಟೇಟ್ ವಾಹನ ಸಂಖ್ಯೆ: ಎಂ. ಹೆಚ್. 09-ಇ 2361 ರಲ್ಲಿ ಆಚಾರ್ಯ ಗಲ್ಲಿ ಹತ್ತಿರ ಹೋಗುತ್ತಿರುವಾಗ ಬಿ.ಜೆ.ಪಿ. ಕಾರ್ಯಕರ್ತರಾದ ಶ್ರೀ ಮಧು ಕಲವಂತಿ ಮತ್ತು 40 ಜನರು ಜವಾಹನದ ಮೇಲೆ ಕಲ್ಲು ತೂರಿದ್ದು, ವಾಹನದ ಹಿಂದೆ ಮತ್ತು ಮುಂಭಾಗದ ಗಾಜುಗಳು ಹೊಡೆದಿರುತ್ತವೆ ಮತ್ತು ಶ್ರೀ ಬಿ.ಐ. ಪಾಟೀಲ ಎಂ.ಎಲ್.ಎ. ರವರಿಗೆ ಸಣ್ಣ ಗಾಯವಾಗಿರುತ್ತದೆ. ಈ ಕುರಿತಂತೆ ಶ್ರೀ ಬಿ.ಐ. ಪಾಟೀಲ್ ಎಂ.ಎಲ್.ಎ. ರವರಿಗೆ ಸಣ್ಣ ಗಾಯವಾಗಿರುತ್ತದೆ. ಈ ಕುರಿತಂತೆ ಶ್ರೀ ಬಿ.ಐ. ಪಾಟೀಲ್, ಶಾಸಕರವರು ಶಹಾಪೂರ ಪೋಲೀಸ್ ಠಾಣೆಗೆ ಹಾಜರಾತಿ ನೀಡಿದ ದೂರಿನನ್ವಯ ಮೊಕದ್ದಮೆ ಸಂಖ್ಯೆ: 20:98 ಕಲಂ 143, 147, 33, 504, 427 ಜೊತೆಗೆ 149 ಐಪಿಸಿ ಪ್ರಕಾರ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ.

ಸುದ್ದಿ ತಿಳಿದ ಕೂಡಲೇ ಹಿರಿಯ ಪೋಲೀಸ್ ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಧಾವಿಸಿ 2 ಗುಂಪಿನ ಮಧ್ಯೆ ಆಗಬೇಕಾಗಿದ್ದ ಗಲಭೆಯನ್ನು ತಪ್ಪಿಸಿರುತ್ತಾರೆ. ಹಾಗೂ ಕೂಡಲೇ ತನಿಖೆಯನ್ನು ಕೈಗೊಂಡು ಮೇಲಿನ ಮೊಕದ್ದಮೆ ಸಂಬಂಧಿಸಿದಂತೆ ಈ ಕೆಳಕಂಡ ಆರೋಪಿಗಳನ್ನು ಕೂಡಲೇ ಬಂಧಿಸಿರುತ್ತಾರೆ.

1) ಖಡೇ ಬಜಾರ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 23: 98 ರ ಪ್ರಕರಣದಲ್ಲಿ ಹಿಂಡಲ್ಲದ ಮನೋಹರ್ ಕಡಲ್‌ಕರ್ ಮತ್ತು ಇತರೆ 7 ಜನರನ್ನು ಬಂಧಿಸಲಾಗಿದೆ.

2) ಕ್ಯಾಮಪ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 8:98ರಲ್ಲಿ ಯಾರನ್ನೂ ಬಂಧಿಸಿರುವುದಿಲ್ಲ.

3) ಷಹಾಪೂರ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 20: 98ರ ಪ್ರಕರಣದಲ್ಲಿ ಶಂಕರ್ ಬಾಲಕೃಷ್ಣ ಬಾಬಲಿ ಮತ್ತು ಇತರೆ 9 ಜನರನ್ನು ದಸ್ತಗಿರಿ ಮಾಡಲಾಗಿದೆ. ಎಲ್ಲಾ ಮೊಕದ್ದಮೆಗಳಲ್ಲಿ ತನಿಖೆಯು ತೀವ್ರ ಗತಿಯಲ್ಲಿ ಮುಂದುವರಿದಿದೆ.

Sri. B.I. Patil:- The local police have failed in giving protection to me, Sir,

Smt. Parmila Nesargi :- Sir, I am on a point of order.

ಇದರ ಮೇಲೆ ಡಿಸ್‌ಕಷನ್ ಇಲ್ಲ. ಕಾಲಿಂಗ್ ಅಟೆನ್‌ಷನ್‌ನಲ್ಲ,

'There shall be no debate on such statement at the time it is made but each member in whose name the item stands in the list of business...

(ಗೊಂದಲ)

ಶ್ರೀ ವಾಟಾಳ್ ನಾಗರಾಜ :- ಈ ಸದನದ ಒಬ್ಬ ಶಾಸಕರ ಮೇಲೆ ಹಲ್ಲೆ ನಡೆಸಿರುವ ವಿಚಾರ...

(ಗೊಂದಲ)

ಅಧ್ಯಕ್ಷರು:- ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸ್ಟೇಟ್‌ಮೆಂಟ್ ಮೇಲೆ ಡಿಸ್‌ಕಷನ್ ಇಲ್ಲ. There cannot be any discussion. He can only ask two clarifications.... I am seeking your ruling.

ಅಧ್ಯಕ್ಷರು:- ನಾನು ತಮಗೆ ಹೇಳುವುದಿಷ್ಟೆ. ಪಾಯಿಂಟ್ ಆಫ್ ಆರ್ಡರ್ ರೇಸ್ ಮಾಡುವಂತಾದ್ದು ಸದಸ್ಯರ ಹಕ್ಕು, ಅದನ್ನು ಅಲೋ ಮಾಡುವುದು, ಡಿಸ್‌ಅಲೋ ಮಾಡುವುದು ನನ್ನ ವಿವೇಚನೆಗೆ ಬಿಟ್ಟದ್ದು. Please address the chair...

ಏಕೆ ತಮ್ಮ ತಮ್ಮಲ್ಲೇ ಚರ್ಚೆ ಮಾಡಿಕೊಳ್ಳುತ್ತಿದ್ದೀರಾ? ತಾವು ವಕೀಲರಾಗಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೊಟ್ಟ ಮೊದಲ ಉತ್ತರ ನೋಡಿದಾಗ ನನಗನ್ನಿಸಿತು, ನಿಯಮ 72 ರ ಪ್ರಕಾರ ಅಂಥ...

ಅಧ್ಯಕ್ಷರು:- ನಾನು ತಮಗೆ ಇಷ್ಟೇ ಹೇಳುತ್ತೇನೆ: Kindly bear with me.....

ಶ್ರೀಮತಿ ಪ್ರಮೀಳಾ ನೇಸರ್ಗಿ: ನಿಯಮ 72ರ ಪ್ರಕಾರ ಎಂದು ಉತ್ತರ ಹೇಳಿಬಿಡಿ. ನಾನು ಎಲ್ಲವನ್ನೂ ತೆಗೆದು ನೋಡಿದರೆ, ಆದರೆ, ನಿಯಮ 72ರ ಪ್ರಕಾರ ಯಾವುದು ಬರುತ್ತದೆಂದು ಗೊತ್ತಾಗಿಲ್ಲ. ನಾನು ಅಂದುಕೊಂಡಂತೆ ಏನೋ ಪ್ರಿಂಟಿಂಗ್ ಮಿಸ್ಟೇಕ್ ಇರಬೇಕು, ಉತ್ತರ ಕೊಡುವಾಗ ತಪ್ಪು ಕೊಟ್ಟಿರಬೇಕೆಂದು, ಇದು ರೂಲ್ 73 ಇರಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ.

ಕಾಲಿಂಗ್ ಅಟೆನ್‌ಷನ್ 73ರ ಪ್ರಕಾರವೆಂದು ಅಂದುಕೊಂಡರೆ, ತಮ್ಮನ್ನು ಕೇಳುತ್ತಿದ್ದೇನೆ. ಕಾಲಿಂಗ್ ಅಟೆನ್‌ಷನ್ 73ರ ಪ್ರಕಾರವೆಂದು ಅಂದುಕೊಂಡರೆ, ಆದರೂ ಕೂಡ 73 (2)ರ ಪ್ರಕಾರ There can be no debate on such statement. Only two clarifications are permitted. ಕ್ಲಾರಿಫಿಕೇಷನ್ ಕೇಳಿದ್ದರೆ ನಾನು ಸುಮ್ಮನೇ ಕುಳಿತುಕೊಳ್ಳುತ್ತಿದ್ದೆ. but he went on arguing. Argument is not permissible...

ಅಧ್ಯಕ್ಷರು:- ಈಗ ನಾನು ಹೇಳುತ್ತೇನೆ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಇನ್ನೊಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಿತ್ತು. ಮಾನ್ಯ ಸದಸ್ಯರಾದ ಶ್ರೀಸೈಯದ್ ಜುಲ್ಫೀಕರ್ ಹಷ್ಮಿಯವರು 3-4 ಕ್ಲಾರಿಫಿಕೇಷನ್ ಕೇಳಿದರು. ಹಾಗೆಯೇ ಶ್ರೀಮಾನ್ ವಿರೂಪಾಕ್ಷಪ್ಪನವರು ಬಹಳ ಗಹನವಾದ ವಿಚಾರ ಪ್ರಸ್ತಾಪಿಸಿ ಅವರೂ ಸ್ವಲ್ಪ ಹೆಚ್ಚು- ಕಡಿಮೆ ಭಾಷಣ ಮಾಡಿದರು. ಆದುದರಿಂದ, ನಾನು ಏನು ಹೇಳುತ್ತೇನೆಂದರೆ, ನಿಯಮಾವಳಿಗಳನ್ನು ನಾವು ಸದನ ನಡೆಸುವುದಕ್ಕೆ ರೂಪಿಸಿದ್ದೇವೆ. ಮಾನ್ಯ ಸದಸ್ಯರು ಸಂಬಂಧಪಟ್ಟ ಮಂತ್ರಿಗಳ ಗಮನ ಸೆಳೆಯುತ್ತಾರೆ, ಮಂತ್ರಿಗಳು ಒಂದುಹೇಳಿಕೆ ನೀಡುತ್ತಾರೆ, ನಂತರ ಸದಸ್ಯರು ಸ್ಪಷ್ಟೀಕರಣ ಕೇಳಬೇಕು. ಸ್ಪಷ್ಟೀಕರಣ ಕೇಳುವುದರಲ್ಲಿ ಒಬೊಬ್ಬ ಸದಸ್ಯರದೂ ಒಂದೊಂದು ವಿಧಾನವಿರುತ್ತದೆ. ಅಧ್ಯಕ್ಷನಾಗಿ ನನ್ನ ಕರ್ತವ್ಯವೇನೆಂದರೆ, ಅವರ ಜೊತೆ ಹೊಂದಿಕೊಂಡು, ಅವರ ಬಾಯಿ ಕಟ್ಟದಂತೆ ಅವರ ಭಾವನೆಗಳನ್ನು ಇಲ್ಲಿ ವ್ಯಕ್ತಪಡಿಸುವುದಕ್ಕೆ ಅವಕಾಶವಾಗಬೇಕು. ತಾವು ವಕೀಲರಾಗಿದ್ದೀರಿ, ತಮಗೆಲ್ಲಾ ಗೊತ್ತಿದೆ, ತಾವು ಲೆಕ್ಕಚಾರವಾಗಿಯೇ ಮಾಡನಾಡುತ್ತೀರಿ, B.I. Patil rarelyl gets up in the House. The object is, it is an assult on him. He is an hon. Members of this House, he has raised it. The Government has replied. Seeking clarification, may be the way he seeks the clarification is not to the way you explaint it but I have got to permit him. There is no force in the point of order you have raised.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನನ್ನ ಅನಿಸಿಕೆ ಇಷ್ಟೆ. ಸೆಕ್ಷನ್ 47 ರಲ್ಲಿ ಕ್ವೆಶ್ಚನ್ ಕೇಳಿದಾಗ

Mr. Speaker :- We don't know what is in store for us in future. Youmay have to face more embrassing situations if you happen to be in my place some time in future. Be more magnanimous. Let us allow him to speak....

ಶ್ರೀಮತಿ ಪ್ರಮೀಳಾ ನೇಸರ್ಗಿ:- ನಾನು ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಹೇಳುವುದೇನೆಂದರೆ, ಇದರ ಬಗ್ಗೆ ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇದೆ, ಮೂರು ಕೈಮ್‌ಗಳು ರಿಜಿಸ್ಟರ್ ಆಗಿದೆ ಮತ್ತು ಇನ್‌ವೆಸ್ಟಿಗೇಷನ್ ನಡೆಯುತ್ತಿದೆಯೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ any statement or discussion ಆದರೆ ಆಗ ನಾವೂ ಚರ್ಚೆ ಮಾಡಬೇಕಾಗುತ್ತದೆ. ತಾವು ಅನುಮತಿ ಕೊಡಬೇಕಾಗುತ್ತದೆ. ಅಕಸ್ಮಾತ್ ತಾವು ಅನುಮತಿ ಕೊಟ್ಟರೆ ನಾನು ಏನು ಹೇಳುತ್ತೇನೆಂದರೆ when the matter is pending in the High Court, ಇದುವರೆವಿಗೂ ತಾವು ಇದರ ಬಗ್ಗೆ ಅನುಮತಿ ಕೊಟ್ಟಿಲ್ಲ. ಕೋರ್ಟ್‌ನಲ್ಲಿ ಪೆಂಡಿಂಗ್ ಇರಬೇಕಾದರೆ ಮಾಡುವುದಕ್ಕೆ ಬರುವುದಿಲ್ಲ only for that reason,.....

ಅಧ್ಯಕ್ಷರು :- ನಾನು ಮಾಡುವುದಿಲ್ಲ. ನಾನೇನು ಹೇಳುತ್ತೇನೆಂದರೆ, ಅವರು ತಮಗಾಗಿರುವ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ ಹೇಳಲಿ. ಹೇಳಬಾರದ್ದನ್ನು ಅವರು ಹೇಳಿದರೆ ಮತ್ತೆ ಯಾರಾದರೂ ಹೇಳಿದರೆ ನಾನು ಅದಕ್ಕೆ ಅವಕಾಶ ಕೊಡಲಾರದಂತೆ ಮಾಡುತ್ತೇನೆ. ಈಗ ಮೂರು ವರ್ಷಗಳಿಂದ ನೀವು ನೋಡಿದ್ದೀರಿ, ನನಗೆ ಅಷ್ಟು ವಿವೇಚನೆ ಇಲ್ಲವೇ? ನನ್ನ ಬಗ್ಗೆ ಅಷ್ಟೂ ವಿಶ್ವಾಸ ಬೇಡವೇ? ನೋಡಿ, ಈಗ ನಾನು ಲಾ ಪಾಸ್ ಮಾಡದೆ, ಓದದೇ ಇಷ್ಟು ಚೆನ್ನಾಗಿ ಮಾಡುತ್ತಿದ್ದೇನೆ. ನಾನು ಲಾ ಓದಿದ್ದರೆ ನಿಮಗ್ಯಾರಿಗೂ ಒಂದೂ ಬ್ರೀಫ್ ಇರುತ್ತಿರಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಈ ವಿಷಯ ಕೋರ್ಟಿನಲ್ಲಿರುವುದಾದರಿಂದ ಕೇಳಿದೆ, ಇಲ್ಲದಿದ್ದರೆ ಕೇಳುತ್ತಿರಲಿಲ್ಲ.

Mr. Speaker :- Let him have his say..

Sri. B.I. Patil :- The local police have failed in giving protection to me. They are lenient to allthese goondas. Earlier to this incident on 14th , my campaign office on College Road was ransacked and damaged. The police did not arrest all the persons goondas involved in the incident. It was a pre-planned attack. In the said attack 5-6 MES workers were seriously injured. In the attack on 16th, I was hospitalised for 4 days. Fortunately, I escaped in that attack. You can imagne Sir, the plight of the common man there. There is no law and order. Expunged as ordered by the chair. The God only knows the fate of the people of this country. I want protection from the Government, Sir.

ಶ್ರೀ ಕೆ. ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ, ಬಿ.ಜೆ.ಪಿ. ಅಭ್ಯರ್ಥಿಯ ಮೆರವಣಿಗೆ ಹೋಗುತ್ತಿರುವ ಸಂದರ್ಭದಲ್ಲಿ ಆ ಮೆರವಣಿಗೆ ಮೇಲೆ ಕಲ್ಲು ಹೊಡೆದಿರುವಂಥ ಜನ.....

(ಗೊಂದಲ)

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪವಿದ. ಈಗಾಗಲೇ ಹೇಳಿದಂತೆ ಇಲ್ಲಿ ನಿಯಮಾವಳಿ ಪ್ರಕಾರ ಇವರಿಗೆ ಚರ್ಚಿಸುವುದಕ್ಕೆ ಅವಕಾಶವಿಲ್ಲ. ಅವರು ಏನು ಕ್ಲಾರಿಫಿಕೇಷನ್ ಕೇಳಿದ್ದಾರೆ, ಅದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕೇ ವಿನ: ಚರ್ಚೆ ಮಾಡಿ ಬೇರೆಯವರು ಪ್ರವೇಶಿಸುವುದಕ್ಕೆ ಅವಕಾಶವಿಲ್ಲ.

ಅಧ್ಯಕ್ಷರು:- ನಿಮ್ಮ ಕ್ರಿಯಾಲೋಪವನ್ನು ಎತ್ತಿಹಿಡಿದಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ನನ್ನ ಪಕ್ಷದ ವಿಚಾರ ಬಂದಾಗ ಮಾತನಾಡಬೇಕೇ? ಬೇಡವೇ? ನನ್ನ ಪಕ್ಷದ ಮೇಲೆ ಸುಳ್ಳು ಆರೋಪ ಬಂದಾಗ ನಾವೇನು ಮಾಡಬೇಕು?

(ಗೊಂದಲ)

12. 10 ಪಿ. ಎಂ.

ಅಧ್ಯಕ್ಷರು :- ಈಗ ಕಲಾಪ ನಡೆಯುವ ವೇಳೆಯಲ್ಲಿ ಯಾರಾದರೂ ಆರೋಪವನ್ನು ಮಾಡಿದರೆ, ಸುಳ್ಳು ಹೇಳಿದರೆ, ಆಡಬಾರದ್ದನ್ನು ಆಡಿದರೆ, ಅದರ ಪ್ರೊಸಿಡಿಂಗ್ಸ್ ಅನ್ನು ತೆಗೆದುಕೊಂಡು ತಕ್ಷಣ ಕಾನೂನು ರೀತಿಯಲ್ಲಿ ಒಂದು ನೋಟೀಸ್ ಕೊಡಿ. ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆ, ಅವರು ನೋಟೀಸ್ ಕೊಟ್ಟಿರುವವರು ಸರ್ಕಾರಕ್ಕೆ ಸ್ಪಷ್ಟೀಕರಣ ಕೇಳುತ್ತಾರೆ, ಸರ್ಕಾರ ಅದಕ್ಕೆ ಉತ್ತರ ಹೇಳುತ್ತದೆ. ನೀವು ಪ್ರೊಸಿಡಿಂಗ್ಸ್ ಇವತ್ತೇ ತೆಗೆದುಕೊಳ್ಳಿ, ನಿಮಗೆಗ ಪ್ರೊಸಿಡಿಂಗ್ಸ್ ಇವತ್ತೇ ಕೊಡಲಿಕ್ಕೆ ಆದೇಶ ನೀಡುತ್ತೇನೆ, ಸೋಮವಾರನೇ ನೋಟೀಸ್ ಕೊಡಿ. ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ :- ಅಷ್ಟರಲ್ಲಿ ಇದು ಪತ್ರಿಕೆಗಳಿಗೆ ಹೋಗುತ್ತದೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:- ತಾವು ಹೇಳುವುದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಪಾಟೀಲರು ಕ್ಲಾರೀಫಿಕೇಷನ್ ಕೇಳಬಹುದು. ಆದರೆ ಕ್ಲಾರಿಫಿಕೇಷನ್ ಹೇಳತಕ್ಕ ಸಂದರ್ಭದಲ್ಲಿ he cannot make sweeping remarks. ಅದಕ್ಕೋಸ್ಕರ ನಾವು ಕೇಳಬೇಕಾಗಿದೆ. ನಮ್ಮ ಪಕ್ಷಕ್ಕೆ ರಕ್ಷಣೆ ಬೇಕು. ಅದು ಪತ್ರಿಕೆಗಳಿಗೆ ಹೋಗಬಾರದು ಎಂದು ನಾವು ಕೇಳುತ್ತಿದ್ದೇವೆ. He is not entitled to do that. The Hon'ble Member Sri B.I. Patil cannot case aspersions on BJP like that.

Mr. Speaker:- I will look into it.

Sri S. Subhash Joshi :- Sir,...

Mr. Speaker :- One can express opinion subject to certain limitations. I understand the anxiety of the Hon'ble Member Sri Subhash Joshi . But, we are bound by certain limitations.

★ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ನಿಜವಾಗಿ ಆಡಗಿದ ವಿಷಯ ಏನೆಂದರೆ, ಒಂದು ಪಕ್ಷದವರ ಮೇಲೆ ಮತ್ತೊಂದು ಪಕ್ಷದವರು ಅಪಾದನೆ ಮಾಡುವುದು ಬೇರೆ, ಆದರೆ ಒಬ್ಬ ಶಾಸಕನಿಗೆ ರಕ್ಷಣೆ ಇಲ್ಲ, ಮತ್ತು ಪೋಲೀಸಿನವರು ಆತನ ಸಹಾಯಕ್ಕೆ ಬರುತ್ತಿಲ್ಲ ಎಂದರೆ, ಅವರು ಎಲ್ಲಿ ಹೋಗಬೇಕು.

(ಗೊಂದಲ)

ಈಗ ಕೇಸ್ ಕೌಂಟರ್‌ಕೇಸ್ ಆಗಿ ರಿಜಿಸ್ಟರ್ ಆಗಿದೆ. ಅದುನಡೆಯಲಿ ಆದರೆ ಇಲ್ಲಿ ಒಬ್ಬ ಶಾಸಕರ ಬಗ್ಗೆ ಪ್ರಸ್ತಾಪ ಆದಂತಹ ಸಂದರ್ಭ ಇದು. ಈಗ ಬಿ.ಜೆ.ಪಿ. ಮುಖಂಡರು ಏನಾದರೂ ಮಾಡಿದ್ದರೆ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಎಂ.ಇ.ಎಸ್. ಸವರು ಏನಾದರೂ ಕಲ್ಲು ಎಸೆದಿದ್ದರೆ ಅವರ ಮೇಲೂ ಕೇಸ್ ಮಾಡಿದ್ದಾರೆ . ಕೌಂಟರ್ ಕೇಸ್ ಎರಡು ಕಡೆ ಆಗಿದೆ. ಅದಕ್ಕೆ ಕಾನೂನು

ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೋ ಅದನ್ನು ತೆಗೆದುಕೊಳ್ಳಲಿ. ಆದರೆ ಒಬ್ಬ ಶಾಸಕನಿಗೆ ಈ ರೀತಿ ಹಲ್ಲೆಯಾಗಿದ್ದು, ಆತನಿಗೆ ಪೋಲೀಸಿನವರಿಂದಲೂ ರಕ್ಷಣೆ ಸಿಗದಿದ್ದ ಮೇಲೆ, ಅವರು ಯಾವ ರೀತಿಯಾಗಿ ಬೆಳಗಾಂ ನಲ್ಲಿ ಕೆಲಸಗಳನ್ನು ಮಾಡಬಹುದು? ಉಳಿದಿದ್ದು ನೀವು ಈ ಕಡೆ ಒಂದು ಏಳೆಂಟು ಜನದ ಮೇಲೆ, ಮತ್ತು ಆ ಕಡೆ ಒಂದು ಏಳೆಂಟು ಜನದ ಮೇಲೆ ಕೇಸ್ ಬುಕ್ ಮಾಡಿ, ಅವರನ್ನು ಅರೆಸ್ಟ್ ಮಾಡಿ, ಬೇಲ್ ಮೇಲಾದರೂ ಬಿಟ್ಟಿರಬಹುದು. ಬಹುಶ: ಎಲ್ಲಾ non- bailable offence ಎಂದು ಕಾಣಿಸುತ್ತದೆ. ಆದರೆ ಇವತ್ತು, ಇರುವುದು ಶಾಸಕರ ಪ್ರಶ್ನೆ, ಅವರಿಗೆ ರಕ್ಷಣೆ ಕೊಡತಕ್ಕಂಥದ್ದನ್ನು ಯಾರು ಮಾಡುತ್ತಾರೆ? ಅದರ ಬಗ್ಗೆ ನೀವು ಹೇಳಿ ಉಳಿದ ವಿಷಯವನ್ನು ನಾವು ಮಾತನಾಡುವಾಗ ಮಾತನಾಡೋಣ.

ಅಧ್ಯಕ್ಷರು:- ಪ್ರೊಸಿಡಿಂಗ್ಸ್ ನಲ್ಲೂ ಕೂಡ ಬಿ.ಐ. ಪಾಟೀಲ್ ರವರು ಏನು ಹೇಳಿದ್ದಾರೆ ಎಂದು ಸರಿಯಾಗಿ ರೆಕಾಡ್ ಆಗಿಲ್ಲ. ಬಿ.ಐ. ಪಾಟೀಲ್ ಏನು ಹೇಳಿದರು ಸುರೇಶ್? If you have heard him because you are very near to him.

Sri. S. Suresh kumar:- It was a sweeping remark.

Mr. Speaker :- It becomes a sweeping remark, is it not so Suresh?
Sri S. Suresh Kumar: Yes Sir.

ಅಧ್ಯಕ್ಷರು :- ಪಾಟೀಲರೇ, ನೀವು ಏನನ್ನು ಹೇಳುವುದಕ್ಕೆ ಅಭಿಪ್ರಾಯ ಪಡುತ್ತಿದ್ದೀರಿ? .....I am interested in resolving this crisis. ಇವೊತ್ತು ಇಡೀ ದೇಶವನ್ನು ಅವರ ಪಕ್ಷ ಆಳುತ್ತಿದ್ದಾರೆ, ಆ ರೀತಿಯ ಒಂದು ಸ್ಟೀಪಿಂಗ್ ರಿಮಾರ್ಕ್ಸ್ ದಾಳಿ ಮಾಡಿದ್ದೇವೆ. ಇತಿಹಾಸದಲ್ಲಿ, ಆದರೆ ಇವತ್ತು ಅವರ ಪರವಾಗಿ ನಿಲ್ಲುತಕ್ಕ ಸೌಭಾಗ್ಯ ನಮಗೆ ಸಿಕ್ಕಿದ್ದು. ಇದಕ್ಕೆ ಅನೇಕ ಕಾರಣಗಳಿವೆ. ಒಂದು, ಪಾಟೀಲರು ಈ ಸದನದ ಒಬ್ಬ ಸದಸ್ಯರು, ಇದರಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ. ಇಲ್ಲ ಬರುವುದು ಸದಸ್ಯರ ರಕ್ಷಣೆಯ ಪ್ರಶ್ನೆ ಮಾತ್ರ. ಸದನದ ಸದಸ್ಯರಿಗೆ ರಕ್ಷಣೆ ಇಲ್ಲ ಎನ್ನುವ ಒಂದೇ ಪ್ರಶ್ನೆ. ನಾನು ತಿಳಿದ ಮಟ್ಟಿಗೆ ನಾನು ಪತ್ರಿಕೆಯಲ್ಲಿ ಬಂದಂತಹ ಅವರ ಫೋಟೋ, ಬಟ್ಟೆ ಬಿಚ್ಚಿ ಅವರ ಮೈಮೇಲೆಲ್ಲಾ ಹಲ್ಲೆ ಮಾಡಿರುವುದನ್ನು ನಾನು ನೋಡಿದ್ದೇನೆ. ಆ ದೃಶ್ಯವನ್ನು ನೋಡಿದಾಗ ಯಾವುದೇ ಪಕ್ಷದ ವ್ಯಕ್ತಿಯಾಗಿರಲಿ, ಅವರಿಗೆ ರಕ್ಷಣೆ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಈಗ ನಾನು ಒಬ್ಬ ಸದಸ್ಯರ ರಕ್ಷಣೆಗೆ ನಾನು ನಿಂತಿದ್ದೇನೆ. ನಾನು ಹೀಗೆ ನಿಂತಿರುವಾಗ ಬಿ.ಐ. ಪಾಟೀಲ್ ರವರಿಗೆ ಪಾಟಾಳ್ ನಾಗರಾಜ್ ರವರು, ಹಗಲು ರಾತ್ರಿ ನಮ್ಮ ವಿರುದ್ಧ ನಿಂತಿದ್ದಾರೆ, ನನ್ನ ಪರ ಈ ವಿಚಾರದಲ್ಲಿ ಬಂದಿರುವಾಗ ನಾವು ಗಡಿ ವಿಚಾರವನ್ನು ಮರೆತು, ಈ ವಿಚಾರದಲ್ಲಿ ನಾವು ಬೆಳಗಾಮ್ ಕರ್ನಾಟಕದಲ್ಲೇ ಇರಲಿ, ನಾವೆಲ್ಲಾ ಒಗ್ಗಟ್ಟಾಗೇ ಇರೋಣ ಎನ್ನುತಕ್ಕಂಥ ಮನೋಭಾವನೆಯೂ ಅವರಿಗೆ ಬರಲಿ ಎನ್ನುತಕ್ಕಂಥದ್ದು ನನಗೆ ಇದೆ. ಅಂತಿಮವಾಗಿ ಮಹಾರಾಷ್ಟ್ರ ಏಕೀಕರಣ ಸದಸ್ಯರಿಗೆ ಪಾಟಾಳ್ ರಕ್ಷಣೆ, ಅವರೆಂದೂ ಮಹಾರಾಷ್ಟ್ರಕ್ಕೆ ಹೋಗಬಾರದು, ಕರ್ನಾಟಕದಲ್ಲೇ ಇರಬೇಕು. ಮತ್ತು ಎಂದೆಂದೂ ಅವರಿಗೆ ನಮ್ಮ ಸಂಪೂರ್ಣ ರಕ್ಷಣೆ ಇದೆ ಎನ್ನುತಕ್ಕ ಮಾತನ್ನು ಕೇಳುತ್ತಾ ಇಂತಹ ಇತಿಹಾಸ ಪ್ರಸಿದ್ಧವಾದ ಪರಿಸ್ಥಿತಿ ನಿರ್ಮಾಣವಾಗಿದ್ದಕ್ಕೆ ನಾನು ಸಂತೋಷ ಪಡುತ್ತೇನೆ. ನಾನಂತೂ ಪಾಟೀಲರ ವಿಚಾರದಲ್ಲಿ ನೂರಕ್ಕೆ ನೂರು ಈ ವಿಚಾರದಲ್ಲಿ ಇದ್ದೇನೆ ಅವರ ಪರ ಎಂದು ಹೇಳಲಿಕ್ಕೆ ಇಷ್ಟ ಪಡುತ್ತೇನೆ.

Sri. B.I. Patil : That proposal we don't want sir. He is giving help to us; that's O.K. Sir.

Mr. Speaker :- Mr. B.I. Patil, the Government is very keen to give you protection. They will meticulously follow all the procedure required under law to register cases against all those people whom you have complained against and action will be taken. There is no problem. Beyond this, if you have any problem, you are at liberty to come and see me. I will take up the matter with the authorities concerned.

ಶ್ರೀ ಪಾಟಾಳ್ ನಾಗರಾಜ್ :- ಎಲ್ಲರನ್ನೂ ಬಂಧಿಸಬೇಕು ಬರೀ 9 ಜನರು ಆಗುವುದಿಲ್ಲ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಅಧ್ಯಕ್ಷರೇ ಒಂದುನಿಮಿಷ. ಮಾನ್ಯ ಪಾಟಾಳ್ ನಾಗರಾಜ್ ಅವರು ಎಂ. ಇ. ಎಸ್ ಸದಸ್ಯರ ಬಗ್ಗೆ ಬಹಳ ಕಾಳಜಿವಹಿಸಿ. ಒಂದು ಷರತ್ತಿನ ಮೇಲೆ ಬೆಂಬಲ ಕೊಟ್ಟಿದ್ದಾರೆ. ಆದರೆ ನನ್ನ ಮೇಲೆ ಹಲ್ಲೆ ಆಯಿತು ಎನ್ನುವ ಪ್ರಶ್ನೆ ಬಂದಾಗ ಅವರು ಮಾಡನಾಡಲೇ ಇಲ್ಲ. ನನ್ನ ಕಡೆಯಿಂದ ಅವರಿಗೆ ಕರ್ನಾಟಕಕ್ಕೆ ಏನೂ ಸೇರಬೇಕಾದುದು ಇರಲಿಲ್ಲವಲ್ಲಾ ಅದಕ್ಕೆ. ಹಾಗಾಗಿ ಮಾಡನಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಪಾಟಾಳ್‌ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪ್ರಮಾಣಿಕವಾಗಿ ನಾನು ಗಮನಿಸಿಲ್ಲ ದಯವಿಟ್ಟು ಮಾನ್ಯ ಶಿವಪ್ಪನವರು ಕ್ಷಮಿಸಬೇಕು. ಆ ತರಹ ಎಂದೂ ನಾನು ಇಲ್ಲ.

(8) ವಿತ್ತೀಯ ಕಾರ್ಯಕಲಾಪಗಳು : 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

★ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ ಈಗಾಗಲೇ ನಾನು ಅನೇಕ ವಿಷಯದ ಮೇಲೆ ಬೆಳಕನ್ನು ಚೆಲ್ಲಿದ್ದಾನೆ. ಮತ್ತು ನಮ್ಮ ಅರ್ಥಸಚಿವರು ಮಂಡಿಸಿದಂತಹ 1998-99ರ ಬಜೆಟ್‌ನಲ್ಲಿ ಯಾವ ರೀತಿಯಾಗಿ ಇದು ಬಡವರ ವಿರೋಧಿ ಆಗಿದೆ ಮತ್ತು ಸಾಮಾನ್ಯ ಜನರ ವಿರೋಧಿ ಆಗಿದೆ ಎನ್ನತಕ್ಕಂಥಾದ್ದನ್ನು ನಾನು ಅನೇಕ ಉದಾಹರಣೆಗಳನ್ನು ಕೊಟ್ಟು ಅವರ ಮನವನ್ನು ಒಲಿಸುವಂಥಾದ್ದು ಮತ್ತು ಅವರಿಗೆ ಈ ಮಾಡಿದಂಥ ಏನು ತಪ್ಪು ಇದೆ ಇದನ್ನು ಸರಿಪಡಿಸಬೇಕೆಂದು ಹೇಳಿ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಆದರೆ ಅವರು ಎಷ್ಟರ ಮಟ್ಟಿಗೆ ಇದನ್ನು ತಿದ್ದಿ ಕೊಳ್ಳುತ್ತಾರೋ ಗೊತ್ತಿಲ್ಲ. ಏಕೆಂದರೆ ಅವರು ಈಗಾಗಲೇ 176 ಐಟಂ ಪೈಕಿ ಸುಮಾರು 151 ಐಟಮ್ ಮೇಲೆ ಏನು ತೆರಿಗೆಯನ್ನು ಹೆಚ್ಚು ಮಾಡಿ ಸಾಧಾರಣ ಜನರಿಗೆ ತೊಂದರೆಗೆ ಈಡು ಮಾಡಿದ್ದಾರೋ ಅದರ ಬಗ್ಗೆ ಅವರು ಮನವರಿಕೆ ಮಾಡಿಕೊಳ್ಳುತ್ತಾರೆ ಎನ್ನತಕ್ಕಂಥಾದ್ದನ್ನು ನಾನು ಭಾವಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು). ಮತ್ತು ಅವರು 27 ನೇ ತಾರೀಖು ಉತ್ತರ ಕೊಡುವಾಗ...

ಶ್ರೀ ಸಿದ್ದರಾಮಯ್ಯ :- 26ನೇ ತಾರೀಖು ಕೊಡುತ್ತೇನೆ.